ಸಂಜಯಗಾಂಧಿ ಆಪಘಾತ ಆಸ್ಪತ್ರೆ ಅವ್ಯವಹಾರ ಕುರಿತು.

48(317) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಎ) ಬೆಂಗಳೂರು ಸಂಜಯಗಾಂಧಿ ಆಪಘಾತ ಆಸ್ಪತ್ರೆಯಲ್ಲಿ ನಿವಾಸಿ ವೈದ್ಯಾಧಿಕಾರಿಯೊಬ್ಬರು ರೂ.2000-00 ಲಂಚ ಪಡೆಯುವಾಗ ಲೋಕಾಯುಕ್ತದ ಬಲೆಗೆ ಸಿಕ್ಕಿಬಿದ್ದು ಸುಮಾರು 2 ತಿಂಗಳಾದರೂ ಸಹ ಇನ್ನು ಕಾನೂನು ಕ್ರಮ ಕೈಗೊಳ್ಳದಿರುವುದು ನಿಜವೇ? ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಬಿ) ಇದೇ ಆಸ್ಪತ್ರೆಯಲ್ಲಿ, ದ್ವಿತೀಯ ದರ್ಜೆ ಸಹಾಯಕರೊಬ್ಬರು ಸುಮಾರು ರೂ.1,30,000-00ಕ್ಕೂ ಹೆಚ್ಚು ಹಣವನ್ನು ದುರುಪಯೋಗಪಡಿಸಿರುವುದು ನಿಜವೇ?

ಸಿ)- ಇದೇ ಆಸ್ಪತ್ರೆಯ ನಿರ್ದೇಶಕರ ಹುದ್ದೆಗೆ ಸಂದರ್ಶನ ನಡೆದು ಒಂದು ತಿಂಗಳಾದರೂ ನೇಮಕಾತಿ ಮಾಡದೇ ವಿಳಂಬ ಮಾಡುತ್ತಿರುವ ಬಗ್ಗೆ ಕಾರಣಗಳೇನು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಎ) ಲೋಕಾಯುಕ್ತ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಬಿ) ಹೌದು- ಆಪಾದಿತರಾದ ಶ್ರೀ ವೈ.ಆರ್. ಮಂಜೇಗೌಡ, ದ್ವಿತೀಯ ದರ್ಜೆ ಸಹಾಯಕರು, ಇವರನ್ನು ದಿನಾಂಕ : 22-10-97ರ ಕಛೇರಿ ಆದೇಶದಲ್ಲಿ ಅಂದಿನಿಂದಲೇ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಅಮಾನತ್ತು ಗೊಳಿಸಲಾಗಿದೆ.

ಸಿ) ನಿರ್ದೇಶಕರ ಹುದ್ದೆಯನ್ನು ಭರ್ತಿ ಮಾಡಲು ಈಗಾಗಲೇ ದಿನಾಂಕ : 11-1-1999ರಂದು ಸಂದರ್ಶನವನ್ನು ನಡೆಸಲಾಗಿದೆ. ನಿರ್ದೇಶಕರ ಹುದ್ದೆಗೆ ನೇಮಕಾತಿ ಮಾಡುವ ಪ್ರಾಧಿಕಾರವು ಸಂಸ್ಥೆಯ ಆಡಳಿತ ಮಂಡಳಿಯಾಗಿದ್ದು ಸದ್ಯದಲ್ಲಿಯೇ ಗೌರ್ವನಿಂಗ್ ಕೌನ್ಸಿಲ್ ಸಭೆ ನಡೆಸಲಾಗುವುದು.

ದೈಹಿಕ ಶಿಕ್ಷಕರಿಗೆ ಸೀನಿಯರ್ ಗ್ರೇಡ್-1 ಹುದ್ದೆಗೆ ಬಡ್ತಿ ಕಲ್ಪಿಸುವ ಕುರಿತು.

49(6) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಎ) ದೈಹಿಕ ಶಿಕ್ಷಕರು 20 ವರ್ಷ ಪೂರ್ಣಗೊಳಿಸಿದಂತೆ ಸೀನಿಯರ್ ಗ್ರೇಡ್-1 ಹುದ್ದೆಗೆ ಬಡ್ತಿ ಕಲ್ಪಿಸಲು ರಾಜ್ಯದ ಶಿಕ್ಷಣ ಸಚಿವರು ಅಧ್ಯಕ್ಷರಾಗಿರುವ ಉನ್ನತ ಮಟ್ಟದ ಸಮಿತಿ ಈ ಹಿಂದೆ ತೀರ್ಮಾನ ಕೈಗೊಂಡಿರುವುದು ನಿಜವಲ್ಲವೆ;